C.R.P.**67**

| Form No.4 (Civil) Deposition Sheets (R.P.No.57) |
|---|

***5*** <u>ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.</u>

<u>ಸ್ಪೆಷಲ್ ಕೇಸ್ ನಂ. 102/2022</u>

ಪ್ರಾ.ಸಾ. 1

ಚಾ.ಸಾ. 1

**<u>ಪ್ರಮಾಣವಚನ ಬೋಧಿಸಿದ ದಿನಾಂಕ 02.08.2023</u>**

ಸಾಕ್ಷಿದಾರರ ಹೆಸರು ಮಲ್ಲಿಕಾರ್ಜುನ

ತಂದೆಯ ಹೆಸರು ಪಾಪಣ್ಣ

ವಯಸ್ಸು 38 ವರ್ಷ

ಉದ್ಯೋಗ ಗಾರೆಕೆಲಸ

ವಾಸ ಬೀರಶೆಟ್ಟಹಳ್ಳಿ, ಪಾಂಡವಪುರ

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>

1. ಚಾಸಾ.2 ರಿಂದ 10 ಗೊತ್ತು. ಚಾಸಾ.2 ರಿಂದ 6 ಎಸ್ ಸಿ ಜನಾಂಗದವರು. ನಾವೆಲ್ಲರೂ ಗಾರೆ ಹಾಗೂ ಕಾಂಕ್ರೀಟ್ ಕೆಲಸ ಮಾಡುತ್ತೇವೆ. ಆರೋಪಿತರು ಗೊತ್ತು. ಅವರು ದೇವೇಗೌಡನಕೊಪ್ಪಲು ಗ್ರಾಮದವರು. ಅವರು ಒಕ್ಕಲಿಗರು.

2. ದೇವೇಗೌಡನಕೊಪ್ಪಲು ಗ್ರಾಮದ ಜ್ಞಾನಬಂಧು ಶಾಲೆಯ ಸರ್ಕಲ್ ಬಳಿ 2 ನೇ ಆರೋಪಿ ಹೊಸದಾಗಿ 3 ಅಂತಸ್ತಿನ ಮನೆ ಕಟ್ಟುತ್ತಿದ್ದು 3 ನೇ ಅಂತಸ್ತಿನ ಕಾಂಕ್ರೀಟ್ ಕೆಲಸಕ್ಕೆ ಒಟ್ಟು 16 ಜನರು ಹೋಗಿದ್ದೆವು. ಆ ದಿನ ನಾನು, ಚಾಸಾ.2 ರಿಂದ 6 ಹಾಗೂ ಉಳಿದ ಹತ್ತು ಜನರು ಸೇರಿ ದಿನಾಂಕ 25.01.2022 ರಂದು ಬೆಳಗ್ಗೆ 7.00 ಗಂಟೆಗೆ ಹೋದೆವು. 4 ಟ್ರ್ಯಾಕ್ಟರ್ ಮರಳು, ಜೆಲ್ಲಿ, 65 ಮೂಟೆ ಸಿಮೆಂಟ್ ಕೈಯಲ್ಲಿ ಕಲಸಿ ಮಿಕ್ಸ್ ಮಾಡಿ ಆರ್

ಸಿಸಿ ಕೆಲಸವನ್ನು ಸಂಜೆ 5.00 ಗಂಟೆಗೆ ಮುಗಿಸಿದೆವು. ನಂತರ ನಾವು ಕೆಲಸ ಮಾಡಿ ಸುಸ್ತಾಗಿದ್ದೆವು. 2 ನೇ ಆರೋಪಿಯ ಹೆಂಡತಿ ನಮಗೆ ಊಟ ಮಾಡಲು ಹೇಳಿದರು. ಅದಕ್ಕೆ ಈಗಾಗಲೇ ಸಮಯ ಆಗಿದೆ ಎಲ್ಲರೂ ಹಳ್ಳಿ ಕಡೆ ಹೋಗಬೇಕು ಗಂಡನಿಗೆ ಹೇಳಿ ಕೂಲಿ ಹಣ ಬೇಗ ಕೊಡುವಂತೆ ಆಕೆಗೆ ಹೇಳಿದೆವು. ಅದಕ್ಕೆ ಅವರ ಮಗ 1 ನೇ ಆರೋಪಿ ನನ್ನ ತಾಯಿಯನ್ನು ಹಣ ಕೇಳುತ್ತೀಯಾ ಏಕಾಏಕಿ ಬಂದು ನಿನ್ನ ಮೇಸ್ತ್ರಿಯನ್ನು ಕೇಳಿಕೋ ಎಂದು ಹೇಳಿ ಮರದ ದೊಣ್ಣೆಯಿಂದ ನನ್ನ ಎದೆಗೆ, ಕಾಲಿಗೆ ಹೊಡೆದನು. ಚಪ್ಪಲಿ ಕಾಲಿನಿಂದ ನನ್ನ ಹೊಟ್ಟೆಗೆ ಒದ್ದನು. ನಾನು ಅಲ್ಲೇ ಕೆಳಗೆ ಬಿದ್ದೆನು. ಕೆಲಸ ಆಳುಗಳು ನನ್ನನ್ನು ಬಿಡಿಸಿಕೊಳ್ಳಲು ಬಂದಾಗ ಆರೋಪಿ ಕಡೆಯಿಂದ ಸುಮಾರು 20 ಜನರ ಗುಂಪು ಬಂದು ನಮ್ಮ ಆಳುಗಳಿಗೆ ಸಿಕ್ಕ ಸಿಕ್ಕ ಕಡೆಯೆಲ್ಲಾ ಹೊಡೆದರು ಅವರಿಗೆ ಏಟಾಗಿ ನೋವಿನಿಂದ ಕಿರುಚಿಕೊಂಡರು. ನಾನು ಘಟನೆಯನ್ನು ಮೊಬೈಲಿನಲ್ಲಿ ವಿಡಿಯೋ ಮಾಡಿಕೊಳ್ಳಲು ಮುಂದಾದಾಗ 2, 3 ನೇ ಆರೋಪಿತರು ನನ್ನನ್ನು ತಬ್ಬಿ ಹಿಡಿದುಕೊಂಡು ನನ್ನನ್ನು ಮೊಬೈಲನ್ನು ಕಿತ್ತುಕೊಂಡು ಕೆಳಕ್ಕೆ ಕೆಡವಿದ್ದರಿಂದ ಅದು ಹಾನಿ ಆಯಿತು. ಅದರಿಂದ ನನಗೆ ಸುಮಾರು ರೂ.10,000/- ನಷ್ಟ ಆಯಿತು. ಅಷ್ಟರಲ್ಲಿ ನನ್ನನ್ನು ಬಿಡಿಸಿಕೊಳ್ಳಲು ಬಂದ ಚಾಸಾ.4 ರವರಿಗೆ ಬಲಗೈಗೆ 1 ನೇ ಆರೋಪಿ ಕಬ್ಬಿಣದ ರಾಡಿನಿಂದ ಚುಚ್ಚಿದನು. ಚಾಸಾ.2 ರವರಿಗೆ 3 ನೇ ಆರೋಪಿ ದೊಣ್ಣೆಯಿಂದ ಹೊಡೆದನು. 4 ನೇ ಆರೋಪಿ ಅದೇ ದೊಣ್ಣೆಯಿಂದ ಚಾಸಾ.3 ರವರಿಗೆ ಹೊಡೆದನು. ನಂತರ ಚಾಸಾ.5 ರವರ ತಲೆಗೆ, ಬೆನ್ನಿಗ ಅದೇ ದೊಣ್ಣೆಯಿಂದ ಹೊಡೆದನು. ನಂತರ ಎಲ್ಲರೂ ಸೇರಿಕೊಂಡು ಮಾದಿಗ ನನ್ನ ಮಕ್ಕಳಾ, ಸೂಳೇ ಮಕ್ಕಳಾ ಎಂದು ಅವ್ಯಾಚ ಶಬ್ಧದಿಂದ ಜಾತಿ ಹಿಡಿದು ಬೈದು ಬೆಂಕಿ ಹಾಕಿ ಸುಡುತ್ತೇವೆಂದು ಬೆದರಿಕೆ ಹಾಕಿದರು. ಚಾಸಾ.3 ರವರಿಗೆ ಬಲಮೊಣಕೈಗೆ ಪಟ್ಟು ಆಯಿತು. ಚಾಸಾ.5 ರವರಿಗೆ ತಲೆಗೆ, ಬೆನ್ನಿಗೆ ಏಟು ಆಯಿತು. ಆಗ ನಾನು ತಪ್ಪಿಸಿಕೊಂಡು ಪಾಂಡವಪುರ ಪೊಲೀಸ್ ಠಾಣೆಗೆ ಬಂದು ವಿಷಯ ತಿಳಿಸಿದಾಗ ಅವರು ಪೊಲೀಸ್ ಪೇದೆಯನ್ನು ನನ್ನೊಂದಿಗೆ ಕಳುಹಿಸಿಕೊಟ್ಟರು. ಅವರು ಸ್ಥಳಕ್ಕೆ ಬಂದು ನೋಡಿದಾಗ 4 ನೇ ಆರೋಪಿ ನಿನಗೆ ಎಷ್ಟು ಧೈರ್ಯ ಪೊಲೀಸರನ್ನು ಕರೆದುಕೊಂಡು ಬಂದಿದ್ದೀಯಾ ಇನ್ಸ್ ಪೆಕ್ಟರ್ ಅನ್ನೇ ಕರೆದುಕೊಂಡು ಬಾ ಎಂದು ಧಮ್ಕಿ ಹಾಕಿದನು.

3. ಆಗ ಪೊಲೀಸರು ನಮ್ಮನ್ನು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು, ನಾವೆಲ್ಲರೂ ಅಲ್ಲಿ ದಾಖಲು ಆಗಿ ಚಿಕಿತ್ಸೆ ಪಡೆದುಕೊಂಡೆವು. ನಾನು ಎಂ ಎಲ್ ಸಿ ಮಾಡಿಸಿದಾಗ ಸದರಿ

ಆಸ್ಪತ್ರೆಗೆ 1, 3 ಮತ್ತು 4 ನೇ ಆರೋಪಿತರು ಬಂದು ಎಂ ಎಲ್ ಸಿ ಚೀಟಿಯನ್ನು ಬಲವಂತವಾಗಿ ಕಿತ್ತುಕೊಳ್ಳುವ ಮೂಲಕ ಇಲ್ಲೇ ನಿನ್ನನ್ನು ಕತ್ತರಿಸಿ ಹಾಕುತ್ತೇವೆಂದು ಚೀಟಿಯನ್ನು ಹರಿದು ಹಾಕಿದರು. ನೀವು ಏನಾದರೂ ದೂರು ಕೊಟ್ಟರೆ ನಮ್ಮ ಸಂಬಂಧಿಕರು ರೌಡಿಗಳು ಇದ್ದಾರೆ ನಿಮ್ಮ ಮನೆಗಳಿಗೆ ಬೆಂಕಿ ಹಾಕಿ ಊರು ಖಾಲಿ ಮಾಡಿಸುತ್ತೇವೆಂದು ಬೆದರಿಕೆ ಹಾಕಿದರು. ಪಾಂಡವಪುರ ವೈದ್ಯರು ನನ್ನನ್ನು ಹಾಗೂ ಚಾಸಾ.2 ನನ್ನ ಅಣ್ಣನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಕೆಆರ್ ಆಸ್ಪತ್ರೆಗೆ ಆ್ಯಂಬುಲೆನ್ಸ್ ಮೂಲಕ ಕಳುಹಿಸಿದರು. ರಾತ್ರಿ 10.00 ಗಂಟೆಯಲ್ಲಿ ಹೋಗಿದ್ದು 1.00 ಗಂಟೆ ವರೆಗೆ ಅಲ್ಲೇ ಇದ್ದು ಚಿಕಿತ್ಸೆ ಪಡೆದು ವಾಪಸ್ ಮನೆಗೆ ಬಂದಿರುತ್ತೇವೆ.

4. ನಂತರ ಘಟನೆ ಕುರಿತು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಆದರೆ ಪೊಲೀಸರು ನಾನು ಕೊಟ್ಟ ದೂರನ್ನು ತೆಗೆದುಕೊಳ್ಳಲಿಲ್ಲ. ನಂತರ ನಾವು ಡಿವೈಎಸ್ ಪಿಯವರ ಹತ್ತಿರ ಬಂದು ವಿಷಯ ತಿಳಿಸಿದೆವು. ಅವರು ದೂರು ತೆಗೆದುಕೊಳ್ಳಲಿಲ್ಲ. 29 ನೇ ತಾರೀಖಿನಂದು ಎಸ್ ಪಿ ರವರ ಹತ್ತಿರ ಹೋಗಿ ವಿಷಯ ತಿಳಿಸಿದೆವು. ದೂರು ದಾಖಲಿಸುತ್ತಾರೆಂದು ಹೇಳಿ ನಮ್ಮನ್ನು ಕಳುಹಿಸಿದರು. ಆದರೆ ಘಟನೆ ಆಗಿ ಒಂದು ತಿಂಗಳು ಆದರೂ ಕೂಡ ನನ್ನ ದೂರನ್ನು ದಾಖಲಿಸಿಕೊಳ್ಳಲಿಲ್ಲ. ಪುನಃ ನಾವು ಎಸ್ ಪಿಯವರ ಹತ್ತಿರ ಹೋಗಿ ಇನ್ನೂ ದೂರು ದಾಖಲಿಸಿಲ್ಲ ಎಂದು ಹೇಳಿದಾಗ ಎಸ್ ಪಿಯವರು ಪಾಂಡವಪುರ ಪೊಲೀಸ್ ಠಾಣಗೆ ಫೋನು ಮಾಡಿ ದೂರು ದಾಖಲಿಸುವಂತೆ ಹೇಳಿದರು. ಅದರಂತೆ ದಿನಾಂಕ 24.02.2022 ರಂದು ಪೊಲೀಸರು ನನ್ನ ದೂರನ್ನು ತೆಗೆದುಕೊಂಡಿದ್ದು, ಸದರಿ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಗಿದೆ.

5. ದೂರು ಕೊಟ್ಟ ನಂತರ ಪೊಲೀಸರು ಚಾಸಾ.10 ಹಾಗೂ 11 ಇವರನ್ನು ಹಾಜುಪಡಿಸಿಕೊಂಡು ಬಂದಾಗ ಘಟನಾ ಸ್ಥಳವಾದ ದೇವೇಗೌಡನಕೊಪ್ಪಲು ಗ್ರಾಮದ 2 ನೇ ಆರೋಪಿ ಮನೆಯ ಮುಂಭಾಗ ಖಾಲಿ ಜಾಗದಲ್ಲಿ ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಮಹಜರ್ ಮಾಡಿದ್ದು, ಆ ಸಮಯದಲ್ಲಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದಂತಹ ಎರಡು ದೊಣ್ಣೆ, ರಾಡ್, ಹಾಗೂ ಕಲ್ಲನ್ನು ಹಾಗೂ ಮೊಬೈಲನ್ನು ನಾನು ಹಾಜರುಪಡಿಸಿದ ಮೇರೆಗೆ ಪೊಲೀಸರು ಮುಂದಿನ ತನ್ಶಿಖೆಗಾಗಿ ಅಮಾನತ್ತುಪಡಿಸಿಕೊಂಡು ವಿವರವಾದ ಮಹಜರ್ ಅನ್ನು ಬೆಳಗ್ಗೆ 9.45 ರಿಂದ 10.45

ರವರೆಗೆ ಮಾಡಿ ಬರೆದು ಓದಿ ಹೇಳಿದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆ. ಮಹಜರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಗಿದೆ. ಜಪ್ತಾದ ಮು.ಮಾ. ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಒಂದು ಕಬ್ಬಿಣದ ರಾಡ್ ಮು.ಮಾ.1, ಎರಡು ದೊಣ್ಣೆಗಳು ಮು.ಮಾ.2 ಮತ್ತು 3, ಒಂದು ಸೈಜು ಕಲ್ಲು ಮು.ಮಾ.4, ಮೊಬೈಲ್ ಮು.ಮಾ.5 ಎಂದು ಗುರುತಿಸಲಾಗಿದೆ. ಮು.ಮಾ.4 ರಿಂದ 5 ನೇ ಆರೋಪಿ ನನಗೆ ಎತ್ತಿ ಹಾಕಲು ಬಂದಿದ್ದನು.

6. ಅದೇ ದಿನಾಂಕ ಸದರಿ ಪಂಚರೊಂದಿಗೆ ಬಂದಾಗ ನಾನು ಇನ್ನೊಂದು ಘಟನಾ ಸ್ಥಳವಾದ ಪಾಂಡವಪುರ ಟೌನ್ ಸಾರ್ವಜನಿಕ ಆಸ್ಪತ್ರೆ ತುರ್ತು ನಿಘಾ ಘಟಕವನ್ನು ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ವಿವರವಾದ ಮಹಜರನ್ನು ಬೆಳಗ್ಗೆ 8.30 ರಿಂದ 9.15 ರವರೆಗೆ ಮಾಡಿ ಬರೆದು ಓದಿ ಹೇಳಿದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆ. ಮಹಜರನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಗಿದೆ. ಸದರಿ ಸ್ಥಳದಲ್ಲಿ ಎಂ ಎಲ್ ಸಿ ಚೀಟಿಯ ಹರಿದು ಹಾಕಿದ್ದ ಸ್ಥಳ ಎಂದು ಪೊಲೀಸರಿಗೆ ತೋರಿಸಿದ ಮೇರೆಗೆ ಮಹಜರ್ ಮಾಡಿದರು. ಘಟನೆ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನನಗೆ ಹಲ್ಲೆ ಮಾಡಿದಂತಹ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿಗಳು ಆಗಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಗಿದೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)
C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.